

ಸಾಹುಕಾರನ ಮನೆಗೆ ನಡೆದ. ಎಂದೂ ಸಾಹುಕಾರನ ಮನೆಗೆ ಚಪ್ಪಲಿ ಮೆಟ್ಟಿಕೊಂಡು ಹೋಗದ ಮರಿಯಪ್ಪ ಇಂದು ವಿಶೇಷವಾಗಿ ಚಪ್ಪಲಿ ಧರಿಸಿಕೊಂಡು ನಡೆದಿದ್ದ.

ಮನೆಮುಂದಿನ ಚಾವಣಿಯ ಗದ್ದಿಗೆಗೆ ಕುಳಿತು ಒಳ್ಳೆ ಗತ್ತಿನಲ್ಲಿ ಎದೆಯುಬ್ಬಿಸಿ ಮೀಸೆ ನೇವರಿಸುತ್ತಾ, ಎಲೆ ಅಡಿಕೆ ಬಾಯಾಡಿಸುತ್ತಾ ಔಟಪ್ಪ ಸಾಹುಕಾರ ಕುಳಿತಿದ್ದ. ಬೀದಿಯಲ್ಲಿ ಮರಿಯಪ್ಪ ಬರುವುದನ್ನು ಕಂಡು ತುಟಿಯಲ್ಲೆ ನಗುತ್ತಾ, 'ಬಾ ಬಾ ನಿನ್ ದಾರಿಯ ಕಾಯ್ತಿದ್ವಾ' ಎಂದುಕೊಂಡು ಎರಡು ಕೈಯಿಂದ ಮೀಸೆ ತಿರುವಿಕೊಳ್ಳುತ್ತಾ, ಮತ್ತಷ್ಟು ಎದೆ ನಿಗುರಿಸಿ ಎತ್ತರಕ್ಕೆ ಕುಳಿತುಕೊಂಡ ಸಾಹುಕಾರ. ಮರಿಯಪ್ಪ ಸಾಲ ತೆಗೆದುಕೊಳ್ಳುವಾಗ ನಡುವೆ ಇದ್ದ ಕರಿಯಪ್ಪನೂ ಔಟಪ್ಪರ ಮನೆಕಡೆಗೆ ದೂರದಲ್ಲಿ ಬರುತ್ತಲಿದ್ದ.

'ನಮಸ್ಕಾರ ಸಾಹುಕಾರ್ರಿಗೆ' ಎಂದು ಚಾವಣಿಯ ಕೆಳಗೆ ನಿಂತು ಕೈಮುಗಿದ ಮರಿಯಪ್ಪ.

'ಬಾ ಮರಿಯಾ. ಹ್ಞಾ, ರೊಕ್ಕಾ ತಂದಿ?...' ಹುಬ್ಬು ಏರಿಸಿ ನಾಟಕೀಯ ನೋಟ ಹರಿಸಿದ್ದ ಸಾಹುಕಾರ.

'ತಂದೀನಿ ಸಾಹುಕಾರ್ರೆ.'

'ಅಟೀಟು ಇಸ್ಗಾಣಲಾ ಚುಕ್ತಾ ಬೇಕು ನೋಡ್ಲೆ' ಖಡಾಕಂಡಿಷನ್ ಇಟ್ಟ ಸಾಹುಕಾರ.

'ಚುಕ್ತನೆ, ಸಾಹುಕಾರ್ರೆ' ಎಂದು ಧೋತರ ಸರಿಸಿ ಚೆಡ್ಡಿಯ ಬಕ್ಕಣದಿಂದ ದುಡ್ಡು ತೆಗೆದು ಎಣಿಸಿ, ಮಗ್ಗುಲು ಬಂದು ನಿಂತ ಕರಿಯಪ್ಪನ ಕೈಗಿಟ್ಟ. ಕರಿಯಪ್ಪ ಎಣಿಸಿ ಸಾಹುಕಾರನ ಕೈಗೆ ರೊಕ್ಕಾ ದಾಟಿಸಿ, 'ವರ್ಷದ ಬಡ್ಡಿ ಅಸಲು ಎಲ್ಲಾ ಚುಕ್ತಾ ಐತಿ ನೋಡ್ರಿ ಧಣ್ಯಾರ' ಎಂದು ಕರಿಯಪ್ಪ ತಲೆ ಮೇಲೆ ಸುತ್ತಿಕೊಂಡಿದ್ದ ಟವೆಲ್ ತೆಗೆದು ಜಾಡಿಸಿ ಹೆಗಲ ಮೇಲೆ ಹಾಕಿಕೊಂಡ. ಮತ್ತೊಮ್ಮೆ ಎಣಿಸಿ ನೋಡಿದ ಸಾಹುಕಾರ, 'ಆಯ್ತು, ಮರಿಯಾ ನಿನಗ ಕೊಟ್ಟ ಸಾಲಾ ತೀರ್ಸಿದಿ ನೋಡಪಾ' ಮೀಸೆ ಮೇಲೆ ಕೈಯಾಡಿಸಿಕೊಂಡ ಸಾಹುಕಾರ ಔಟಪ್ಪ ಹುಸಿ ನಕ್ಕ. 'ಸಾಹುಕಾರ್ರಾ ನಾವು ಬರ್ತೀವಿ... ಕರಿಯಪ್ಪ ನಡಿ ಮುಗಿತಲ್ಲಾ' ಎಂದು ಅಲ್ಲಿಂದ ಇಬ್ಬರೂ ತಿರುಗಿದರು. ಹೊಲವನ್ನು ಹೊಡೆಯಬೇಕೆಂದು ಹೊಂಚು ಹಾಕಿದ್ದ ಔಟಪ್ಪ ಸಾಹುಕಾರನ ಮುಖಕ್ಕೆ ಬಾರಿಸಿದಂತಾಗಿ, ಒಳಗಡೆ ಕಸಿವಿಸಿಯಾಗಿ ಕೈಕೈ ಹಿಚುಕಿಕೊಂಡ.

★★★

ಎರಡು ದಿನದೊಳಗೆ ಮರಿಯಪ್ಪನ ಹೊಲಕ್ಕೆ ಗೆಳೆಯ ಮಂಜಪ್ಪ ತನ್ನ ಹೊಲದಿಂದ ಆಳು ಹಚ್ಚಿ, ಪೈಪ್‌ಲೈನ್ ಕಡಿಸಿ, ಪೈಪು ಹಾಕಿಸಿ ನೀರು ಮರಿಯಪ್ಪನ ಹೊಲಕ್ಕೆ ಬರುವಂತೆ ಮಾಡಿಸಿದ. ಬಿಸಿಲಿಗೆ ಬಿರುಕು ಬಿಟ್ಟು ಬೆಂದು ಹೋಗಿದ್ದ ಭೂಮ್ತಾಯಿ ಮುಂದೆ ಒಂದು ವಾರದಲ್ಲಿ ತನಗೆ ತೃಪ್ತಿಯಾಗುವಷ್ಟು ನೀರು ಹೀರಿಕೊಂಡು ಹಿಗ್ಗಿ ನಿಂತಳು. ಮತ್ತೆರಡು ದಿನ ಮೇಲ್ಪಸಿಯ ಆರಲುಬಿಟ್ಟು, ಬೀಜ ಗೊಬ್ಬರ ತಂದು, ಎರಡು ದಿನದ ಅನಂತರ ನೇಗಿಲು ಹಾಕಿ ಉಳುಮೆ ಮಾಡಿ ಬಿತ್ತಿಬಿಟ್ಟ ಮರಿಯಪ್ಪ. ಇದ್ದ ನಾಲ್ಕು ಎಕರೆ ಹೊಲದಲ್ಲಿ ಒಂದು ಎಕರೆ ಭತ್ತ, ಒಂದು ಎಕರೆ ಮೆಕ್ಕೆಜೋಳ, ಎರಡು ಎಕರೆ ಭೂಮಿಗೆ ಕಬ್ಬು ಹಾಕಿದ. ಹೊಸ ಹುರುಪಿನಲ್ಲಿ ತಂಪುಹೊತ್ತಿನಲ್ಲಿ ಗೆಳೆಯನನ್ನು ನೆನೆಯುತ್ತಾ, ಬೆಳೆಯ ಚಾಕರಿ ಮಾಡುತ್ತಾ ನಡೆದ.

ನಾಲ್ಕು ತಿಂಗಳು ಕಳೆದಿತ್ತು. ಮಳೆಯೂ ಆಗಾಗ ಅಲ್ಪ ಸ್ವಲ್ಪ ಆದದ್ದರಿಂದ ಬೆಳೆಯ ಹಸಿರಿನ ಅವತಾರ ಸೃಷ್ಟಿಯಾಗಿ ಸುತ್ತಲೂ ಹಸಿರು ಹಾಸಿಕೊಂಡು ಭೂಮ್ತಾಯಿ ನಗುತ್ತಿದ್ದಳು. ನೋಡಿದ ಮರಿಯಪ್ಪನ ಸಂತೋಷಕ್ಕೆ ಪಾರವೇ ಇಲ್ಲ. ಬಿಡುವಿಲ್ಲದೆ ಹೊಲದಲ್ಲಿಯೇ ಹೆಂಡತಿ ಚೆನ್ನಮ್ಮನನ್ನು ಪುಟ್ಟ ಮಗ ಕಲ್ಲನನ್ನು ಕಟ್ಟಿಕೊಂಡು ಗುಡಿಸಲು ಹೂಡಿ ಹೊಲದಲ್ಲಿ ಇರತೊಡಗಿದ. ಬೆಳೆದ ಬೆಳೆಯನ್ನು ತನ್ಮಯನಾಗಿ ನೋಡುತ್ತ, ಬೆವರು ಹರಿಸಿ ಹರ್ಷಿಸತೊಡಗಿದ. ಹಾಕಿದ ಭತ್ತದ ಬೆಳೆ